ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1.

ಸಂಖ್ಯೆ: ಸಿ8(10) ಶಾಶಿಅ - ಮಾನ್ಯತೆ - /2003-2004. ದಿನಾಂಕ: 14-01-2004.

# ಸುತ್ತೋಲೆ

ವಿಷಯ:- ರಾಜ್ಯದಲ್ಲಿನ ಅನುದಾನಿತ ಪ್ರೌಢ ಶಾಲೆಗಳಲ್ಲಿ ದಾಖಲಾತಿ/ಹಾಜರಾತಿಯು ಕನಿಷ್ಠ ಪ್ರಮಾಣಕ್ಕಿಂತ ಕಡಿಮೆ ಇದ್ದಲ್ಲಿ ಮಾನ್ಯತೆ ಹಿಂತೆದುಕೊಳ್ಳುತ್ತಿರುವುದು ಹಾಗೂ ವೇತನ ಸ್ಥಗಿತಗೊಳಿಸುತ್ತಿರುವ ಬಗ್ಗೆ ಸೂಚನೆಗಳ ಕುರಿತು.

ಉಲ್ಲೇಖ:- 1. ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 137 ಎಸ್.ಇ.ಪಿ. 2001. ದಿನಾಂಕ: 23-01-2002.

2. ಜಿಲ್ಲಾ ಉಪ ನಿರ್ದೇಶಕರುಗಳಿಂದ ಈ ಬಗ್ಗೆ ಕೇಳುತ್ತಿರುವ ಸ್ಪಷ್ಟೀಕರಣ ಕುರಿತು.

3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 52 ವಿವಿಧ - 99. ದಿನಾಂಕ: 02-02-2000.

0-0-0-0-0

ಉಲ್ಲೇಖ-3 ರ ಸರ್ಕಾರದ ಅಧಿಸೂಚನೆಯಲ್ಲಿ ಅನುದಾನಿತ ಶಾಲೆಯಲ್ಲಿನ ಪ್ರತಿ ತರಗತಿಗಳಲ್ಲಿ ಕನಿಷ್ಠ 25 ಕ್ಕಿಂತ ಕಡಿಮೆ ವಿದ್ಯಾರ್ಥಿಗಳ ಹಾಜರಾತಿ ಇರಬೇಕೆಂದು ನಿಗದಿಪಡಿಸಿದೆ. ಈ ಸಂಖ್ಯೆಗಿಂತ ಕಡಿಮೆ ಹಾಜರಾತಿ ಇರುವ ಶಾಲೆಗಳ ವೇತನವನ್ನು ಸ್ಥಗಿತಗೊಳಿಸಿ ಮಾನ್ಯತೆ ಹಿಂತೆದುಕೊಳ್ಳುವ ಬಗ್ಗೆ ಉಪ ನಿರ್ದೇಶಕರುಗಳು ಈ ಕಛೇರಿಯಿಂದ ಸ್ಪಷ್ಟೀಕರಣ ಕೋರಿರುತ್ತಾರೆ. ಪ್ರಯುಕ್ತ ಈ ಬಗ್ಗೆ ಈ ಕೆಳಗಿನಂತೆ ಸೂಚನೆಗಳನ್ನು ನೀಡಲಾಗಿದೆ.

ಉಲ್ಲೇಖ 1 ರ ಸರ್ಕಾರದ ಸುತ್ತೋಲೆ ಸೂಚನೆಯಲ್ಲಿ ಪ್ರಥಮ ಬಾರಿಗೆ ಹಾಜರಾತಿ ಕೊರತೆ ಆಗುವ ಶಾಲೆಗಳಿಗೆ ದಾಖಲಾತಿ ಕೊರತೆಯನ್ನು ಮೊದಲ ಬಾರಿಗೆ ಒಂದು ವರ್ಷಕ್ಕೆ ಮಾತ್ರ ಮನ್ನಾ ಮಾಡಿ ಶಾಲೆಯು ಮುಂದುವರಿಯಲು ಅವಕಾಶ ನೀಡಲು ಸೂಚಿಸಿದೆ. ಆ ಪ್ರಕಾರ ಮನ್ನಾ ಮಾಡಿ ಮುಂದುವರಿದ ಶಾಲೆಗಳ ಪರಿಸ್ಥಿತಿಯನ್ನು ಮುಂದಿನ ವರ್ಷ ಕಡ್ಡಾಯವಾಗಿ ವಿಮರ್ಶಿಸಿ ಒಂದು ವೇಳೆ ವಿದ್ಯಾರ್ಥಿ ಸಂಖ್ಯಾ ಬಲವನ್ನು ಉತ್ತಮ ಪಡಿಸಿಕೊಳ್ಳದಿದ್ದಲ್ಲಿ ನಿಯಮಗಳನ್ವಯ ಮುಚ್ಚಲು ಕ್ರಮ ತೆಗೆದುಕೊಳ್ಳಲು ಸೂಚಿಸಿದೆ. ಆದ್ದರಿಂದ ಯಾವುದೇ ಅನುದಾನಿತ ಶಾಲೆಯಲ್ಲಿ ದಾಖಲಾತಿ / ಹಾಜರಾತಿ ಕನಿಷ್ಠ ಸಂಖ್ಯೆಗಿಂತ ಕಡಿಮೆಯಾದಾಗ ತಕ್ಷಣ ಶಾಲಾ ಮಾನ್ಯತೆಯನ್ನು ಹಿಂತೆದುಕೊಳ್ಳಲು ಬರುವುದಿಲ್ಲ. ಇದರಿಂದ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತದೆ. ಪ್ರಯುಕ್ತ ಈ ಬಗ್ಗೆ ಈ ಕೆಳಗಿನಂತೆ ಸೂಚನೆಗಳನ್ನು ನೀಡಿದೆ.

ತಮ್ಮ ವ್ಯಾಪ್ತಿಯಲ್ಲಿನ ಯಾವುದಾದರೂ ಅನುದಾನಿತ ಪ್ರೌಢಶಾಲೆಗಳ ದಾಖಲಾತಿ / ಹಾಜರಾತಿಯು ಕನಿಷ್ಠ ಸಂಖ್ಯೆಗಿಂತ ಕಡಿಮೆ ಆಗಿದ್ದಲ್ಲಿ ಕಡಿಮೆ ದಾಖಲಾತಿಯನ್ನು ಗುರ್ತಿಸಿದ ಕೂಡಲೇ ಆಡಳಿತ ಮಂಡಳಿಗೆ ಸದರಿ ಶಾಲಾ ಶಿಕ್ಷಕರ ವೇತನವನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಸ್ಥಗಿತಗೊಳಿಸಲಾಗುವುದೆಂದು ಸೂಚನೆ ನೀಡುವುದು. ಮತ್ತು ಅಂತಹ ಶಾಲೆಗಳ ಸಿಬ್ಬಂದಿ ವೇತನವನ್ನು ಆ ಶೈಕ್ಷಣಿಕ ವರ್ಷಾಂತ್ಯದವರೆಗೂ ಮುಂದುವರಿಸುವುದು. ಶೈಕ್ಷಣಿಕ ವರ್ಷಾಂತ್ಯಕ್ಕೆ ವೇತನಾನುದಾನವನ್ನು ಹಿಂದೆ ನೀಡಿದ ನೋಟೀಸಿನ ಪ್ರಕಾರ ಸ್ಥಗಿತಗೊಳಿಸುವುದು. ಮತ್ತು ಮುಂದಿನ ಶೈಕ್ಷಣಿಕ ವರ್ಷದ ಜೂನ್ ಜುಲೈ ತಿಂಗಳುಗಳಲ್ಲಿ ಶಾಲೆಗೆ ಕಡ್ಡಾಯವಾಗಿ ಭೇಟಿ ನೀಡಿ ದಾಖಲಾತಿ ಪರಿಶೀಲಿಸಿ ಉತ್ತಮಗೊಂಡಿದೆಯೇ ಇಲ್ಲವೆ ಎಂಬುದನ್ನು ದೃಢಪಡಿಸಿಕೊಳ್ಳಬೇಕು. ಉತ್ತಮಗೊಂಡಿದ್ದಲ್ಲಿ ಯಾವ ತಿಂಗಳಿನಿಂದ ಶಿಕ್ಷಕರ ವೇತನವನ್ನು ಸ್ಥಗಿತಗೊಳಿಸಲಾಗುತ್ತೋ ಅಲ್ಲಿಂದ ವೇತನಗಳನ್ನು ಬಿಡುಗಡೆ ಮಾಡುವುದು. ಒಂದು ವೇಳೆ ಹಾಜರಾತಿ ಉತ್ತಮಗೊಳ್ಳದಿದ್ದಲ್ಲಿ ಕೂಡಲೇ ಆಡಳಿತ ಮಂಡಳಿಗೆ ಇನ್ನೊಂದು ಸೂಚನೆ ನೀಡಿ ಮುಂದಿನ ಶೈಕ್ಷಣಿಕ ವರ್ಷದಿಂದ ಶಾಲೆಗೆ ನೀಡಿರುವ ಮಾನ್ಯತೆಯನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಪ್ರಯುಕ್ತ ಶಾಲೆಗೆ ಯಾವುದೇ ತರಗತಿಗೆ ದಾಖಲಾತಿ ಮಾಡಬಾರದು ಮತ್ತು ಇರುವ ವಿದ್ಯಾರ್ಥಿಗಳು ಬೇರೆ ಶಾಲೆಗೆ ಹಾಜರಾಗಲು ಅನುಕೂಲವಾಗುವಂತೆ ವರ್ಗಾವಣೆ ಪತ್ರ ಸಹಿತ ಅಗತ್ಯ ದಾಖಲೆಗಳನ್ನು ಸಕಾಲದಲ್ಲಿ ನೀಡುವುದು. ಸೂಚನೆ ಉಲ್ಲಂಘಿಸಿ ಶಾಲೆ ಮುಂದುವರೆಸಿದಲ್ಲಿ ಇದಕ್ಕೆ ಸರ್ಕಾರ ಹೊಣೆಯಲ್ಲ. ಆಡಳಿತ ಮಂಡಳಿಯೇ ಮುಂದಿನ ಆಗುಹೋಗುಗಳಿಗೆ ಜವಾಬ್ದಾರರೆಂದು ಕಟ್ಟುನಿಟ್ಟಾಗಿ ಸೂಚನೆ ನೀಡುವುದು. ಮತ್ತು ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕೆ ಮುಂಚೆ ಮೂರು ತಿಂಗಳು ಮುಂಚಿತವಾಗಿ ಇದೇ ಸೂಚನೆಯನ್ನು ನೆನಪಿಸಿ ಮತ್ತೊಂದು ಸೂಚನೆಯನ್ನು ಸಹ ನೀಡುವುದು. ಈ ರೀತಿ ಸೂಚನೆ ನೀಡಿದ ಅವಧಿಯಲ್ಲಿ ಶಾಲಾ ಸಿಬ್ಬಂದಿಗೆ ವೇತನವನ್ನು ನೀಡುವುದು ಸಂಪೂರ್ಣ ಹೊಣೆ ಆಡಳಿತ ಮಂಡಳಿಯದೆಂದೂ ಸಹ ತಿಳಿಸಿರಬೇಕು. ಹಾಗೂ ಇಲಾಖೆಯಿಂದ ವೇತನಾನುದಾನವನ್ನು ನೀಡಬಾರದು. ಈ ರೀತಿ ನೋಟೀಸುಗಳನ್ನು ನೀಡಿದ ನಂತರದ ಮುಂದಿನ ಶೈಕ್ಷಣಿಕ ವರ್ಷದಿಂದ ಸದರಿ ಶಾಲೆಗೆ ನೀಡಿರುವ ಮಾನ್ಯತೆಯನ್ನು ಹಿಂತೆಗೆದುಕೊಳ್ಳಬಹುದೆಂಬ ಶಿಫಾರಸ್ಸಿನೊಂದಿಗೆ ನೋಟೀಸು ನೀಡಿರುವ ಪ್ರತಿಗಳ ಸಹಿತ ನಿರ್ದೇಶಕರು, ಪ್ರೌಢ ಶಿಕ್ಷಣ ಇವರಿಗೆ ವರದಿ ಕಳುಹಿಸುವುದು. ಮತ್ತು ನಿರ್ದೇಶಕರಿಂದ ಮಾನ್ಯತೆ ಹಿಂತೆಗೆದುಕೊಂಡಿರುವ ಬಗ್ಗೆ ಆದೇಶ ಹೊರಡುವುದಕ್ಕೆ ಮುಂಚೆ ಶಾಲೆಯಲ್ಲಿ ಯಾವುದೇ ದಾಖಲಾತಿ ಆಗದಂತೆ ಸೂಕ್ತ ಎಚ್ಚರಿಕೆಯನ್ನು ವಹಿಸಿ ಸೂಚನೆಗಳನ್ನು ಉಪ ನಿರ್ದೇಶಕರುಗಳು ಆಡಳಿತ ಮಂಡಳಿಗಳಿಗೆ ನೀಡಿರಬೇಕು.

ಅಂತಹ ಶಾಲೆಗಳ ಮಾನ್ಯತೆಗಳನ್ನು ನಿರ್ದೇಶಕರು, ಪ್ರೌಢ ಶಿಕ್ಷಣ ಇವರು ಹಿಂತೆಗೆದುಕೊಂಡಿರುವ ಬಗ್ಗೆ ಆದೇಶ ಹೊರಡಿಸಿದ ನಂತರ ಉಪ ನಿರ್ದೇಶಕರುಗಳು ಈ ಮಾಹಿತಿಯನ್ನು ಸ್ಥಳೀಯ ಸಾರ್ವಜನಿಕರ ಗಮನಕ್ಕೆ ಸ್ಥಳೀಯ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ತರಬೇಕಾಗುತ್ತದೆ. ಮತ್ತು ಮುಚ್ಚಿದ ಶಾಲೆಯಲ್ಲಿನ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಸೂಚಿಸುವ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ವಶಕ್ಕೆ ಒಪ್ಪಿಸಲು ಕ್ರಮ ತೆಗೆದುಕೊಳ್ಳುವುದು.

ಶಾಲಾ ಮಾನ್ಯತೆಯನ್ನು ಹಿಂತೆಗೆದುಕೊಂಡ ಶಾಲೆಯು ವಿದ್ಯಾರ್ಥಿಗಳಿಂದ ವಸೂಲು ಮಾಡಿದ ಶುಲ್ಕಗಳಿಂದ ಖರೀದಿಸಿರುವ ಚರ ಸ್ಥಿರ ಎಲ್ಲಾ ಆಸ್ತಿಗಳ ವಿವರವಾದ ಪಟ್ಟಿಯನ್ನು ಸಿದ್ಧಪಡಿಸಿ ಅದು ಪರಭಾರ, ಹಸ್ತಾಂತರ, ಅಥವಾ ದುರುಪಯೋಗವಾಗದಂತೆ ಎಚ್ಚರ ವಹಿಸುವುದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

ಬೆಂಗಳೂರು ಉತ್ತರ ಜಿಲ್ಲಾ ಉಪ ನಿರ್ದೇಶಕರು, ಈ ಕಛೇರಿಯ ಪತ್ರ ಸಂಖ್ಯೆ: ಸಿ8(10) ಶಾ.ಶಿ.ಅ. ವಿ.ಮು./2002–2003. ದಿನಾಂಕ: 20–06–2002, 08–07–2002 ರಲ್ಲಿ ಪ್ರಥಮ ಬಾರಿಗೆ ಹಾಜರಾತಿ ಕೊರತೆಯನ್ನು ಮನ್ನಾ ಮಾಡಿ ಮುಂದುವರೆಸಲು ಅನುಮತಿಸಿರುವ 17 ಶಾಲೆಗಳಿಗೆ ತಕ್ಷಣ ಭೇಟಿ ನೀಡಿ ಈಗಿನ ದಾಖಲಾತಿ/ಹಾಜರಾತಿಯನ್ನು ಪರಿಶೀಲಿಸಿ ಉತ್ತಮಗೊಂಡಿದೆಯೋ / ಇಲ್ಲವೇ ಎಂಬ ಬಗ್ಗೆ ವರದಿಯನ್ನು ಅವರ ಸ್ಪಷ್ಟ ಅಭಿಪ್ರಾಯದೊಂದಿಗೆ ಕಳುಹಿಸುವುದು. (ಪಟ್ಟಿ ಲಗತ್ತಿಸಿದೆ.)

ಉಪ ನಿರ್ದೇಶಕರುಗಳು ಈಗ ಈ ಕಛೇರಿಗೆ ಹಾಜರಾತಿ ಕೊರತೆ ಇರುವ ಬಗ್ಗೆ ಬರೆಯುತ್ತಿರುವ ಶಾಲೆಗಳಿಗೆ ನಿಯಮಾನುಸಾರ ನೋಟೀಸುಗಳನ್ನು ನೀಡಲಾಗಿದೆಯೇ? ನೀಡಿದ್ದಲ್ಲಿ ನೋಟೀಸುಗಳ ಪ್ರತಿಗಳೊಂದಿಗೆ ವರದಿ ಕಳುಹಿಸಲು ಸೂಚಿಸಿದೆ.

ಆಯಾ ಜಿಲ್ಲಾ ಉಪ ನಿರ್ದೇಶಕರುಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಅನುದಾನಿತ ಶಾಲೆಗಳಲ್ಲಿ ಹಾಜರಾತಿ ಕಡಿಮೆಯಾದ ಸಂದರ್ಭಗಳಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಈ ಸುತ್ತೋಲೆಯಲ್ಲಿ ತಿಳಿಸಿರುವ ಪ್ರಕಾರವೇ ತೆಗೆದುಕೊಳ್ಳಬೇಕು. ಮತ್ತು ಈ ರೀತಿ ಕ್ರಮ ತೆಗೆದುಕೊಂಡ ನಂತರ ಅಂತಿಮವಾಗಿ ಈ ಕಛೇರಿ ಆದೇಶಕ್ಕೆ ಮಾತ್ರ ಪ್ರಸ್ತಾವನೆಗಳನ್ನು ಸಲ್ಲಿಸತಕ್ಕದ್ದು. ಈ ಸೂಚನೆಗಳನ್ನು ಯಾವುದೇ ಗೊಂದಲಕ್ಕೆ ಮತ್ತು ಕಿರುಕುಳಕ್ಕೆ ಅವಕಾಶ ಇಲ್ಲದಂತೆ ಪಾಲಿಸುವಂತೆಯೂ ಸಹ ಸೂಚಿಸಿದೆ.

ಮಾನ್ಯ ಆಯುಕ್ತರಿಂದ ಕರಡು
ಅನುಮೋದಿಸಲ್ಪಟ್ಟಿದೆ.

ಆಯುಕ್ತರು. (ಪ್ರಭಾರ)

<u>ಪ್ರತಿಯನ್ನು:-</u>

1. ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳಿಗೆ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
3. ರಾಜ್ಯದ ಎಲ್ಲಾ ಶಾಲಾ ಆಡಳಿತ ಮಂಡಳಿಯ ಕಾರ್ಯದರ್ಶಿಗಳಿಗೆ.
4. ಕಛೇರಿ ಪ್ರತಿ.

N.P.M. \\Type6\d\Est 2\17867_03.doc